-　　-　　　　　　　ಕ್ರಿ.ಮಿಸ್. ನಂ.1/2022

**ಪಿ.ಡಬ್ಲ್ಯೂಃ 1**

**(ಇಂದು ದಿಃ 18/11/2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಬೋಧಿಸಲಾಯಿತು.)**

**ಪಾಟೀ ಸವಾಲು : ಎದ್ರುದಾರನ ಪರ ಶ್ರೀ ಎನ್ ಇ ಹೆಚ್ ವಕೀಲರಿಂದ,**

ನನಗೆ ಸದರಿ ಪ್ರಕರಣದಲ್ಲಿ ಸಾಕ್ಷಿ ನುಡಿಯಲು ಅರ್ಜಿದಾರರು ಹೇಳಿರುತ್ತಾರೆ. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ನನ್ನಮುಖ್ಯ ವಿಚಾರಣೆ ಕನ್ನಡದಲ್ಲಿ ಇದೆ. ನನ್ನ ಮುಖ್ಯ ವಿಚಾರಣೆಗೆ ನಾನೇ ಮಾಹಿತಿ ನೀಡಿರುತ್ತೇನೆ. ದಿಃ 10.06.2020 ರಂದು ಅರ್ಜಿದಾರರ ವಿವಾಹವು ಕಾರವಾರದಲ್ಲಿ ಎದುರುದಾರರ ಮನೆಯಲ್ಲಿ ಆಗಿದೆ ಹಾಗೂ ಅದನ್ನು ನಾನು ನಮ್ಮ ವಕೀಲರಿಗೆ ಹೇಳಿರುತ್ತೇನೆ. ನಮ್ಮ ವಕೀಲರು ನಾನು ಹೇಳಿದ್ದ ವಿಷಯವನ್ನೇ ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದಿರುತ್ತಾರೆ. ಅರ್ಜಿದಾರರು ಈ ಮೊದಲು ಬೇರೆ ಮದುವೆ ಮಾಡಿಕೊಂಡಿರುತ್ತಾರೆ. ಅರ್ಜಿದಾರರ ಮೊದಲನೆ ಮದುವೆಯ ತಲಾಕ್ ಆಗಿದ್ದು ಅದರ ದಾಖಲೆಯನ್ನು ನೀಡಿರುತ್ತೇವೆ. ತಲಾಕ್ ನ ದಾಖಲೆಯನ್ನು ಇಂದು ನ್ಯಾಯಾಲಯದಲ್ಲಿ ನಾನು ನೋಡಿಲ್ಲ. ಅರ್ಜಿದಾರರು ನನ್ನ ಮಗಳು ಅಗಿದ್ದಾರೆ ಹಾಗೂ ಅದನ್ನು ನಾನು ನಮ್ಮ ವಕೀಲರಿಗೆ ಹೇಳಿರುತ್ತೇನೆ. ನನ್ನ ಮುಖ್ಯ ವಿಚಾರಣೆಯಲ್ಲಿ ನಾನು ಅರ್ಜಿದಾರರ ಸ್ನೇಹಿತ ಆಗಿರುತ್ತೇನೆಂದು ಬರೆದಿದ್ದಾರೆ ಅದು ಸರಿಯಲ್ಲ ನಾನು ಆ ರೀತಿ ನಮ್ಮ ವಕೀಲರಿಗೆ ಹೇಳಿದ್ದು ಇಲ್ಲಾ. ಅರ್ಜಿದಾರರ ಮದುವೆಯ ಕಾಲಕ್ಕೆ ನಾನು, ನನ್ನ ಪತಿ ಹಾಗೂ ಎದುರುದಾರರ ತಂದೆ ಹಾಜರಿದ್ದೇವು. ಮದುವೆಯ ಕಾಲಕ್ಕೆ ನಾವು ಬಂಗಾರದ ಆಭರಣಗಳನ್ನು ಅರ್ಜಿದಾರರಿಗೆ ನೀಡಿದ್ದು ಇರುವುದಿಲ್ಲ. ಅರ್ಜಿದಾರರಿಗೆ ಗರ್ಭಪಾತವಾದಾಗ ನಾವು ಭಟ್ಕಳದ ಆಶಿಯಾ ಅಸ್ಪತ್ರೆಯ ಮೈನಾಸ್ ವೈಧ್ಯರಿಗೆ ತೋರಿಸಿರುತ್ತೇವೆ. ಸದರಿ ವೈಧ್ಯರು ಅರ್ಜಿದಾರರರಿಗೆ ಚಿಕಿತ್ಸೆ ನೀಡಿ ದಾಖಲೆ ಬರೆದು ನಮಗೆ ನೀಡಿರುತ್ತಾರೆ. ಸದರಿ ಆಸ್ಪತ್ರೆಯ ದಾಖಲೆಯನ್ನು . ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇವೆ. ನ್ಯಾಯಾಲಯದ ದಾಖಲೆಗಳಲ್ಲಿ ಆಶಿಯಾ ಆಸ್ಪತ್ರೆಯ ದಾಖಲೆಗಳು ಇಲ್ಲಾ ಎಂದರೆ ಸರಿಯಲ್ಲ. ಅರ್ಜಿದಾರರು ಪೊಲೀಸ ಠಾಣೆಯಲ್ಲಿ ಯಾವ ದಿನಾಂದಕ್ಕೆ ದೂರನ್ನು ನೀಡಿದ್ದಾರೆಂದು ನನಗೆ ನೆನಪಿಲ್ಲ. ಸದರಿ ಪೋಲಿಸ್ ಠಾಣೆಯ ದಾಖಲೆ ಹಾಗೂ ಕಾರವಾರದ ಲಾಡ್ಜ ನಲ್ಲಿದ್ದ ಎಲ್ಲಾ ದಾಖಲೆಯನ್ನು ನಾವು ನಮ್ಮ ವಕೀಲರಿಗೆ ನೀಡಿರುತ್ತೇವೆ. ಲಾಡ್ಜ ನಲ್ಲಿ ಎದುರುದಾರರು ಅರ್ಜಿದಾರರಿಗೆ ಹೊಡೆಯಲು ಬಂದಾಗ ನಾವು ಠಾಣೆಯಲ್ಲಿ ದೂರನ್ನು ನೀಡಿರುತ್ತೇವೆ. ಕಾರವಾರದಲ್ಲಿ ನಾವು ಎದುರುದಾರರ ವಿರುದ್ಧ ಹಾಕಿದ್ದ ಪ್ರಕರಣ ಮುಕ್ತಾಯಗೊಂಡಿದೆ ಎಂದರೆ ಸರಿಯಲ್ಲ. ಎದುರುದಾರರು ಹಾಗೂ ಅವರ ಕುಟುಂಬದ ವಿರುದ್ದ ಕಾರವಾರದಲ್ಲಿ ನಾವು ದಾಖಲಿಸಿರುವ ಪ್ರಕರಣ ನಂಬರ್ ಸಿಸಿ

590/2022 ಆಗಿದೆ. ಸಿಸಿ 590/2022ರ ಪ್ರಕರಣದಲ್ಲಿ ಎದುರುದಾರರನ್ನು ದಿಃ 11.11.2024 ರಂದು ಬಿಡುಗಡೆ ಮಾಡಲಾಗಿದೆ ಎಂದರೆ ಸರಿಯಲ್ಲ. ಎದುರುದಾರರು ಅರ್ಜಿದಾರರ ವಿರುದ್ಧ ವಿವಾಹ ವಿಚ್ಛೇದನಕ್ಕಾಗಿ ಒ ಸ್ ನಂ. 104/2021 ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿ. ಎದುರುದಾರರು ಯಾವುದೇ ತಪ್ಪನ್ನು ಮಾಡಿಲ್ಲಾ ಎಂದರೆ ಸರಿಯಲ್ಲ. ಅರ್ಜಿದಾರರು ಎದುರುದಾರರಿಗೆ ಪ್ರತ್ಯೇಕ ಮನೆ ಮಾಡಲು ಪೀಡಿಸುತ್ತಿದ್ದರು ಎಂದರೆ ಸರಿಯಲ್ಲ. ಎದುರುದಾರವರ ಮನೆಯಲ್ಲಿ ಅವರ ತಂದೆ ತಾಯಿ ಇರುತ್ತಾರೆ. ಎದುರುದಾರರು ವಯಸ್ಸಾದ ತನ್ನ ತಂದೆ ತಾಯಿಯನ್ನು ನೋಡಿಕೊಳ್ಳುತ್ತಾ ಅವರ ಜೊತೆಯಲ್ಲಿ ವಾಸಿಸಲು ಅರ್ಜಿದಾರರಿಗೆ ಹೇಳುತ್ತಿದ್ದರು ಎಂದರೆ ಸರಿಯಲ್ಲ. ಅರ್ಜಿದಾರರ ಆಸೆ ಈಡೇರದ ಕಾರಣ ಅರ್ಜಿದಾರಳು ಎದುರುದಾರರ ಮನೆ ಬಿಟ್ಟು ಬಂದಿರುತ್ತಾಳೆ ಎಂದರೆ ಸರಿಯಲ್ಲ. ಸದರಿ ಪ್ರಕರಣದಲ್ಲಿ ಕೇಳಿದ ಜೀವನಾಂಶವನ್ನು ಎದುರುದಾರರು ನೀಡಲು ಬಾಧ್ಯಸ್ತನಲ್ಲ ಎಂದರೆ ಸರಿಯಲ್ಲ. ನಾವು ಹೇಳುವಂತ ವರಮಾನ ಎದುರುದಾರರಿಗೆ ಇಲ್ಲಾ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ**

**ಸಹಿ ಇದೆ**

**ಪ್ರ.ದ.ನ್ಯಾ.ದಂ., ಭಟ್ಕಳ**